# 74

# “ಫರಿಸಾಯರ ಹುಳಿಯ ಬಗ್ಗೆ ಎಚ್ಚರವಾಗಿರ್ರಿ”

## ಮತ್ತಾಯ 23:1-39; ಮಾರ್ಕ 12:38-40; ಲೂಕ 20:45-47, ಒಂದು ನಿಕಟ ನೋಟ

ಒಂದು ದಿವಸ ಯೇಸು ತನ್ನ ಅಪೋಸ್ತಲರಿಗೆ, “ಎಚ್ಚರಿಕೆ, ಫರಿಸಾಯರ ಹುಳಿ ಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರಿ” ಅಂದನು (ಮತ್ತಾಯ 16:6).[1] ಮೊದಲನೆಯದಾಗಿ ಅಪೊಸ್ತಲರು ಈ ವಿಚಾರದಲ್ಲಿ ಗೊಂದಲಕ್ಕೊಳಗಾದರೂ, ನಂತರದಲ್ಲಿ “ಫರಿಸಾಯರ *ಬೋಧನೆಯನ್ನು* ಕುರಿತು ಎಚ್ಚರಿಕೆಯಾಗಿರಬೇಕೆಂದು” ಸ್ಪಷ್ಟಪಡಿಸಿಕೊಂಡರು (ಮತ್ತಾಯ 16:12; ಒತ್ತಿ ಹೇಳಿದ್ದು ನನ್ನದು).[2] ಇನ್ನೊಂದು ಸಂದರ್ಭದಲ್ಲಿ ಆತನು “ಫರಿಸಾಯರ ಕಪಟವೆಂಬ ಹುಳಿಹಿಟ್ಟಿನ ವಿಷಯದಲ್ಲಿ *ಜಾಗರೂಕರಾಗಿರಿ”* ಅಂದನು (ಲೂಕ 12:1; ಒತ್ತಿ ಹೇಳಿದ್ದು ನನ್ನದು).[3]

ಫರಿಸಾಯರಂತೆ ಬೇರೆ ಯಾವ ವೈರಿಗಳು ಕ್ರಿಸ್ತನ ಹಿಂದೆ ಇರಲಿಲ್ಲ. ಫರಿಸಾಯರು ಪಾತ್ರಹೊಂದದ ಯಾವದೇ ಪಾಠವನ್ನು ನಾವು ನೀಡಿರುವುದಿಲ್ಲ; ಅವರು ಎಂಥವರಾಗಿದ್ದರೂ[4] ಏನನ್ನು ನಂಬಿದರೂ, ಏನನ್ನು ದ್ವೇಷಿಸಿದರೂ ಚಿತ್ರಣವನ್ನು ಆಗಾಗ್ಗೆ ನೀಡಿದ್ದೇವೆ. ಹಾಗೂ ಮತ್ತಾಯ 23, ಮಾರ್ಕ ಹಾಗೂ ಲೂಕ ಸುವಾರ್ತೆಯಿಂದ, ಅವರ ಕುರಿತಾದ ವಿಚಾರ ಗಳನ್ನು ಪ್ರದರ್ಶಿಸಿದ್ದೇವೆ, ಫರಿಸಾಯರ ಹುಳಿ ಹಿಟ್ಟಿನ ಬಗ್ಗೆ ಯೇಸು ಏಕೆ ತನ್ನ ಅಪೊಸ್ತಲರಿಗೆ ಎಚ್ಚರಿಸಿದನು? ಹುಳಿ ಹಿಟ್ಟು ಅವರ ಕಪಟತನವೇ ಎಂದು ಏಕೆ ಹೇಳಿದನು? ಇದಕ್ಕೆ ಉತ್ತರವನ್ನು ಮತ್ತಾಯ 23ರ ಅಧ್ಯಯನದಿಂದ ಪಡೆಯಬಹುದಾಗಿದೆ.

ಈ ಅಧ್ಯಾಯದಲ್ಲಿ ಮಾತ್ರ ಕರ್ತನು ಇಂಥಹ ಖಂಡನೀಯ ಪದಗಳನ್ನು ಉಪಯೋಗಿ ಸಿರುವನು. ಆತನ ಈ ಕಠಿಣವಾದ ಪದ ಬಳಕೆಗೆ, ಅನೇಕ ಕಾರಣಗಳಿವೆ ಎಂದು ಈಗಾಗಲೇ ಚರ್ಚಿಸಿದ್ದೇವೆ.[5] ಇದರಿಂದ ಆತನು ಫರಿಸಾಯರನ್ನು ದಿಗ್ಭ್ರಾಂತ್ರಗೊಳಿಸಿದನು. ಈ ಚರ್ಚೆಗೆ ಇನ್ನೊಂದು ಕಾರಣವನ್ನು ನೋಡೋಣ: *ಇದು ನಮಗೆ ಅಗತ್ಯವಿರುದರಿಂದ,* ಇದನ್ನು ಸಂಗ್ರಹಿಸಿಡಲಾಗಿದೆ. ಯೇಸುವಿನ ಈ ಮಾತುಗಳು ಸಾರ್ವತ್ರಿಕವಾಗಿದೆ; ಮಾನವ ಜನಾಂಗವೇ ಫರಿಸಾಯರಂತಹ ರೋಗಕ್ಕೆ ತುತ್ತಾಗಿದೆ. ಫರಿಸಾಯರಂತೆ, ನಮ್ಮಲ್ಲಿ ಅನೇ ಕರು ನಮ್ಮ ಬಲಹೀನತೆಯನ್ನು ಅರಿಯದಾಗಿದ್ದೇವೆ. “ಕರ್ತನ ಈ ಕಠಿಣವಾದ ಮಾತುಗಳು” ನಮಗೆ ಲಾಭದಾಯಕವಾಗಿವೆ.

ನಮ್ಮನ್ನು ಹೊರತುಪಡಿಸಿ, ಇತರರಲ್ಲಿರುವ ಕಪಟತನವನ್ನು ನಾವುಗಳು ಕಂಡು ಹಿಡಿಯುತ್ತೇವೆ.[6] ಮತ್ತಾಯ 23ನ್ನು ಧ್ಯಾನ ಮಾಡಿ ನಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳೋಣ.[7]

### ವಿವರಣೆ[8] (ಮತ್ತಾಯ 23:1-12; ಮಾರ್ಕ 12:38, 39; ಲೂಕ 20:45, 46)

ಆತನು ನೀಡಿದ ಶಾಪಗಳಿಗೆ ಹಿನ್ನೆಲೆಯನ್ನು ನೀಡಿ, ಕ್ರಿಸ್ತನು ಜನರೊಂದಿಗೆ ಮಾತಾಡಿದನು: “ಈಗ ಶಾಸ್ತ್ರಿಗಳು ಹಾಗೂ ಫರಿಸಾಯರು ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದರು” (ಮತ್ತಾಯ 23:2). ಶಾಸ್ತ್ರಿಗಳು ಹಾಗೂ ಫರಿಸಾಯರು ತಮಗೆತಾವೇ ಅಧಿಕಾರವನ್ನು

ಮಾಡಿಕೊಂಡಿದ್ದರು, ಸಾಮಾನ್ಯವಾಗಿ ಮೋಶೆಯ ನಿಯಮಗಳ ಅಧಿಕಾರವನ್ನು ತಾವೇ ಮಾಡಿಕೊಂಡಿದ್ದರು, ಫರಿಸಾಯರೊಂದಿಗೆ, ಶಾಸ್ತ್ರಿಗಳು ಗುರುತಿಸಿಕೊಂಡಿದ್ದ ಪಂಥವಾಗಿದ್ದರು.[9] ಆದದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ" (ಮತ್ತಾಯ 23:3ಎ). ಅಂದರೆ *ಮೋಶೆಯ ಧರ್ಮಶಾಸ್ತ್ರಕ್ಕೆ ಅವರು ಹೇಳಿದ* ಸಂಗತಿಗಳು ಸಂಬಂಧ ಪಟ್ಟಿರುವುದರಿಂದ ಅದನ್ನು ಮಾಡಿರಿ, ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ, ಅವರು ಹೇಳುತ್ತಾರೆ ಹೊರತು ನಡೆಯುವದಿಲ್ಲ (ಮತ್ತಾಯ 23:3ಬಿ). "ಅವರು ಹೇಳುವದನ್ನು ಮಾಡುವದಿಲ್ಲ" ಎಂಬ ಸಂಗತಿಯ ಕಾರಣದಿಂದ ಯೇಸು ಅವರನ್ನು ಶಪಿಸಿದನು. NIV ಯಲ್ಲಿ, "ತಮ್ಮ ಪ್ರಸಂಗವನ್ನು ಕ್ರಿಯೆಯಲ್ಲಿ ತರುವುದಿಲ್ಲ." ಈ ಹಿಂದೆ ಹೇಳಿದ ಹಾಗೆ ಫರಿಸಾಯರು ಕಪಟ ತನದ ಪಾಪ ಪ್ರಜ್ಞೆ ಹೊಂದಿದ್ದರು (ಮತ್ತಾಯ 23:13, 14, 15, 23, 25, 27, 29; ನೋಡಿ ಲೂಕ 12:1).[10]

"ಫರಿಸಾಯರು ಹೇಳುತ್ತಾರೆ ವಿನ ಮಾಡುವದಿಲ್ಲ" ಎಂಬುದಕ್ಕೆ ಕ್ರಿಸ್ತನು ನಿದರ್ಶನವನ್ನು ನೀಡಿದನು: "ಅವರು ಭಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು" (ಮತ್ತಾಯ 23:4). ಅವರು ಭಾರವಾದ ನಿಯಮಗಳನ್ನು ಹೇಳುತ್ತಿದ್ದರು (ಅಪೊಸ್ತಲರ ಕೃತ್ಯಗಳು 15:10), ಅವರು ತಮ್ಮ ಸಂಪ್ರದಾಯವೆಂಬ ಭಾರವನ್ನು ಹೊರಿಸಿದ್ದರು (ಮಾರ್ಕ 7:3). ಇತರರು ನಿಯಮ ಹಾಗೂ ಸಂಪ್ರದಾಯಗಳನ್ನು ಪಾಲಿಸಬೇಕಿತ್ತು, ಆದರೆ ತಾವುಗಳು ಅದನ್ನು ಪಾಲಿಸುತ್ತಿರಲಿಲ್ಲ.[11] ತಂದೆತಾಯಿಗಳನ್ನು ಪೋಷಿಸುವಲ್ಲಿ "ಕೊರ್ಬಾನ್" ಬಳಸುತ್ತಿದ್ದರು (ಮಾರ್ಕ 7:11-13).[12] "ಭಾಷೆಯನ್ನು ನೀಡುವ ಕುರಿತಾದ ಪಾಠವನ್ನು ಸಹ ನಾವು ನೀಡುತ್ತಿದ್ದೇವೆ" (ಮತ್ತಾಯ 23:16-22).

ಫರಿಸಾಯರು "ತಾವುಗಳು ಎಲ್ಲರಿಗಿಂತ ಶ್ರೇಷ್ಟರು" ಎಂದು ಜನರು *ತಿಳಿಯ* ಬಯಸಿದರು: "ಅವರು ತಮ್ಮ ಕೆಲಸಗಳನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ. ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಗಳನ್ನು ಅಗಲಮಾಡುತ್ತಾರೆ" (ಮತ್ತಾಯ 23:5ಎ). "ಜ್ಞಾಪಕ ಪಟ್ಟಿ" ಅಂದರೆ "ಕಾಯುವ" ಕ್ಷೇಮವಾಗಿಡುವ ಎಂಬ ಅರ್ಥವಾಗಿದೆ.[13] ಯೆಹೂದ್ಯರು "ದೇವರ ವಾಕ್ಯಗಳನ್ನು ಬರೆದು ಚಿಕ್ಕ ಪೆಟ್ಟಿಗೆಗಳಲ್ಲಿ ಇಡುತ್ತಿದ್ದರು." ಅವರು ಆ ಪೆಟ್ಟಿಗೆಗಳನ್ನು ಕೈಗಳಿಗೆ, ಹಣೆಗೆ ಹಾಗೂ ತಮ್ಮ ಬಾಗಿಲು ನಿಲುವು ಪಟ್ಟಿಗಳಲ್ಲಿ ಕಟ್ಟಿಡುತ್ತಿದ್ದರು. ಅದು ಧರ್ಮೋಪದೇಶಕಾಂಡ 6:8, 9[14]ರ ಪ್ರಕಾರದ ಅಕ್ಷರಶಃ ಕ್ರಿಯೆಯಾಗಿತ್ತು (ನೋಡಿ ಧರ್ಮೋಪದೇಶಕಾಂಡ 11:18-20). ಫರಿಸಾಯರು ಇತರರಿಗಿಂತ ತಮ್ಮ ಪೆಟ್ಟಿಗೆಗಳನ್ನು[15] ಹಾಗೂ ಜ್ಞಾಪಕ ಪಟ್ಟಿಗಳನ್ನು ಅಗಲ ಮಾಡಿಕೊಂಡಿದ್ದರು.

ಇದಕ್ಕೆ ಸಂಬಂಧಿಸಿದಂತೆ ಯೇಸು, "ತಮ್ಮ ಗೊಂಡೆಗಳನ್ನು ಉದ್ದಮಾಡುತ್ತಾರೆ" ಅಂದನು (ಮತ್ತಾಯ 23:5ಬಿ). ಧರ್ಮಶಾಸ್ತ್ರದ ನೆನಪಿನಾರ್ಥವಾಗಿ, ಅವರು ತಮ್ಮ ನಿಲುವಂಗಿಗಳ "ನಾಲ್ಕು ಭಾಗಗಳಲ್ಲಿ" ಗೊಂಡೆಗಳನ್ನ ಕಟ್ಟಿಕೊಳ್ಳಬೇಕಿತ್ತು (ಅರಣ್ಯಕಾಂಡ 15:38, 39; ಧರ್ಮೋಪದೇಶಕಾಂಡ 22:12).[16] ಅವರು ಜ್ಞಾಪಕ ಪಟ್ಟಿಗಳನ್ನು ಎಲ್ಲರಿಗೂ ಕಾಣಿಸುವಂತೆ ಕಟ್ಟಿಕೊಳ್ಳುತ್ತಿದ್ದರು.

ಮಾರ್ಕ ಹಾಗೂ ಲೂಕನ ಪ್ರಕಾರ ಫರಿಸಾಯರು ಹಾಗೂ ಶಾಸ್ತ್ರಿಗಳಲ್ಲಿದ್ದ ತೋರಿಕೆ ಯನ್ನು ನಿದರ್ಶನವನ್ನು ನೀಡಿ:[17] "ಅವರು" ನಿಲುವಂಗಿ ಕಟ್ಟುಕೊಂಡು ತಿರುಗಾಡುತ್ತಿದ್ದರು (ಮಾರ್ಕ 12:38; ನೋಡಿ ಲೂಕ 20:46). ಉದ್ದವಾದ ನಿಲುವಂಗಿಗಳು ಶ್ರೀಮಂತರ ಹಾಗೂ ಪಂಡಿತರ ಸಂಕೇತವಾಗಿತ್ತು (ಮಾರ್ಕ 12:38; LB).[18]

ಈ ಧಾರ್ಮಿಕ ವ್ಯಕ್ತಿಗಳು ಏಕೆ ಈ ವಿಧವಾದ ಪ್ರದರ್ಶನವನ್ನು ಮಾಡುತ್ತಿದ್ದರು? ಅಂದರೆ ಮನುಷ್ಯರ ಗೌರವವನ್ನು ಪಡೆಯಲು ಮಾಡುತ್ತಿದ್ದರು. "ಅವರು ಔತಣ ಪ್ರಸ್ತಗಳಲ್ಲಿ ಪ್ರಥಮಸ್ಥಾನ" (ಮತ್ತಾಯ 23:6ಎ). ಅವರು ಕರೆಯಿಸಿಕೊಂಡವರ ಬಳಿಯಲ್ಲಿ ಕೂತು

ಊಟ ಮಾಡಲು ಹವಣಿಸುತ್ತಿದ್ದರು (ನೋಡಿ ಲೂಕ 14:7-11). "ಸಭಾಮಂದಿರಗಳಲ್ಲಿ ಮುಖ್ಯ ಪೀಠಗಳು" (ಮತ್ತಾಯ 23:6ಬಿ). ಆ ಪೀಠಗಳು, ... ಮುಂಭಾಗದಲ್ಲಿ ಇರುತ್ತಿದ್ದವು.[19] "ಅಂಗಡಿ ಬೀದಿಗಳಲ್ಲಿ ... ನಮಸ್ಕಾರಗಳು ಜನರಿಂದ ಬೋಧಕರೆನಿಸಿಕೊಳ್ಳುವುದು ಇಷ್ಟವಾಗಿತ್ತು" (ಮತ್ತಾಯ 23:7). "ಮಹಾ" "ರಬ್ಬಿಯೇ" ಎಂದು ಜನರು ಹೇಳಿ ವಂದಿಸುವದನ್ನು ಅವರು ಇಷ್ಟಪಡುತ್ತಿದ್ದರು!

"ರಬ್ಬಿ" ಎಂಬ ಧಾರ್ಮಿಕ ಚರ್ಚೆಯನ್ನು ಕರ್ತನು ಮಾಡಿರುವನು:

> ಆದರೆ ನೀವು ಬೋಧಕರನ್ನಿಸಿಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು [ಕ್ರೈಸ್ತರು[20]], ನೀವೆಲ್ಲರು ಸಹೋದರರು. ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ; ಪರಲೋಕದಲ್ಲಿರುವಾತನೊಬ್ಬನೇ ನಿಮಗೆ ತಂದೆ. ಮತ್ತು ಗುರುಗಳು ಅನ್ನಿಸಿಕೊಳ್ಳಬೇಡಿರಿ; ಕ್ರಿಸ್ತನೊಬ್ಬನೇ ನಿಮಗೆ ಗುರುವು (ಮತ್ತಾಯ 23:8-10).[21]

"ಬೋಧಕರೆಂದು" "ತಂದೆಯೆಂದು" ಹಾಗೂ "ಸ್ವಾಮಿ" ಎಂದು ಯಾರನ್ನು ಕರೆಯ ಬೇಡಿರಿ ಅಂದರೆ "ಪ್ರತಿಯೊಂದು ವಿಚಾರದಲ್ಲು" ಈ ಹೇಳಿಕೆಯನ್ನು ಖಂಡಿಸಿರುವುದಿಲ್ಲ. "ಬೋಧಕರಾಗಿ ಹಾಗೂ ನಾಯಕರಾಗಿ ಕೆಲಸ ಮಾಡದವರ ಕುರಿತಾಗಿ ಹೊಸ ಒಡಂಬಡಿಕೆಯು ಹೇಳಿಕೆಯನ್ನು ನೀಡಿರುತ್ತದೆ" (ಎಫೆಸ 4:11; ಇಬ್ರಿಯ 13:17, 24). ನನ್ನ ಕುಟುಂಬದ ಯಜಮಾನನ್ನು "ತಂದೆ"ಯೆಂದು ಕರೆಯುವಲ್ಲಿ ಯಾವುದೇ ತಪ್ಪು ಇರುವುದಿಲ್ಲ (ಎಫೆಸ 6:2).[22] ಆದರೆ ಧಾರ್ಮಿಕವಾಗಿ "ತಂದೆ" ಎನ್ನುವದನ್ನು ಖಂಡಿಸಿದ್ದನು. ಆಯ್ಕೆ ಮಾಡಿದ ಕೆಲವರನ್ನು "ತಂದೆ" ಎಂದು ಕರೆದು ಅವರನ್ನು ಉನ್ನತ ಸ್ಥಾನಕ್ಕೆ ಏರಿಸುವುದನ್ನು ಕ್ರಿಸ್ತನು ಇಷ್ಟಪಡಲಿಲ್ಲ. ಮಹಾ ಅಪೋಸ್ತಲನಾದ ಪೌಲನನ್ನು "ಸಹೋದರ"ನೆಂದು, ನೀವೆಲ್ಲರು ಸಹೋದರರೆಂದು ಕರೆಯಲಾಗಿದೆ (2 ಪೇತ್ರ 3:15). ಸ್ತ್ರೀ ಸೇವಕಿಯನ್ನು "ಸಹೋದರಿ ಫೋಯಬೆ" (ರೋಮಾಪುರ 16:1) ಎಂದು ಕರೆಯಲಾಗಿದೆ. ಕೌಟುಂಬಿಕ ಸಂಬಂಧದ ಈ ಹೇಳಿಕೆಯು ಕ್ರೈಸ್ತತ್ವಕ್ಕೆ ಯೋಗ್ಯವಾಗಿದೆ.

## ನಿಂದನೆ (ಮತ್ತಾಯ 23:13-36; ಮಾರ್ಕ 12:40; ಲೂಕ 20:47)

ಈಗ ಆತನು ಫರಿಸಾಯರನ್ನು ಕುರಿತು ಎಂಟು ಶಾಪಗಳನ್ನು ಹಾಕಿದನು. "ಅಯ್ಯೋ ನಿಮ್ಮ ಗತಿಯನ್ನು ಏನು ಹೇಳಲಿ" ಎಂದು ಮತ್ತಾಯನ ಸುವಾರ್ತೆಯಲ್ಲಿ ಏಳು ಸಾರಿ, ಮಾರ್ಕ ಲೂಕನ ದಾಖಲೆಗಳಲ್ಲಿ ಎಂಟನೆಯದನ್ನು ಕಾಣುತ್ತೇವೆ.[23] "ಈ ವಿಧವಾದ ಮಾತುಗಳು"[24] ಖಂಡಿಸುವ ಹೇಳಿಕೆಗಳಾಗಿವೆ. ಫರಿಸಾಯರ ಪಾಪಗಳನ್ನು ಯೇಸು "ಒಂದು ಚಿಕ್ಕ ಸಾರಾಂಶವಾಗಿ" ಹೇಳಿರುವನು.[25]

### ಸಂಪ್ರದಾಯ ಹಾಗೂ ಸತ್ಯ (ಮತ್ತಾಯ 23:13)

ಮೆಸ್ಸೀಯನ ಕುರಿತು ತಪ್ಪು ಅಭಿಪ್ರಾಯವು, ಯೇಸುವನ್ನು ಅರಸನೆಂದು ಒಪ್ಪಿಕೊಳ್ಳು ವದಕ್ಕೆ ಅಡ್ಡಿಯುಂಟು ಮಾಡಿತು. ಜನರಲ್ಲೂ ಸಹ ಇದೇ ಅಭಿಪ್ರಾಯ ಉಂಟಾಗಿತ್ತು.[26]

### ಹಣ ಹಾಗೂ ಕರುಣೆ (ಮತ್ತಾಯ 23:14; ಮಾರ್ಕ 12:40; ಲೂಕ 20:47)

ವಿಧವೆಯರು, ಸಹಾಯಕ್ಕಾಗಿ ಫರಿಸಾಯರನ್ನು ಅವಲಂಭಿಸಿದಾಗ, ನಾಯಕರು ಈ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಅವರನ್ನು ಮೋಸಗೊಳಿಸಿದರು.[27] ವಿಧವೆ ಯಲಿಂದ ಕದ್ದುಕೊಳ್ಳುವದು ಕರ್ತನ ದೃಷ್ಟಿಯಲ್ಲಿ ಘೋರ ಪಾಪವಾಗಿತ್ತು (ವಿಮೋಚನಕಾಂಡ 22:22-24; ಧರ್ಮೋಪದೇಶಕಾಂಡ 27:19).

**ಗೆಲವು ಮತ್ತು ಪರಿವರ್ತನೆ (ಮತ್ತಾಯ 23:15)**

ಅನ್ಯರನ್ನು ಯೆಹೂದ್ಯ ಮತಕ್ಕೆ ಪರಿವರ್ತನೆ ಮಾಡುವಲ್ಲಿ ಫರಿಸಾಯರು ತೀರ್ವವಾದಿಗಳಾಗಿದ್ದರು (ವಚನ 15).[28] ಆದರೆ ಸತ್ಯ ದೇವರ ಕಡೆಗೆ ಜನರನ್ನು ತಿರುಗಿಸುವ ಬದಲು, ಹೆಚ್ಚು ಫರಿಸಾಯರನ್ನು ಅವರು ಮಾಡಿದ್ದರು. ಅವರು ತಮ್ಮದೇ ಆದ ಸಿದ್ಧಾಂತಗಳನ್ನು ಬಳಸಿ ಅಂದರೆ, "ಹಿರಿಯರ ಸಂಪ್ರದಾಯಗಳಿಂದ" ವಿಜಯಿಗಳಾಗಿದ್ದರು. "ಅವುಗಳಿಗೆ ಸನ್ಮಾನ ನೀಡಿದ್ದರು" (ಮಾರ್ಕ 7:3). ಆದ್ದರಿಂದ ಅವರು "ಎರಡರಷ್ಟು ನರಕಪಾತ್ರರಾದರು."[29]

**ಅನುಕೂಲತೆ ಹಾಗೂ ಸಮರ್ಪಣೆ (ಮತ್ತಾಯ 23:16-22)**

"ಆಣೆಗಳನ್ನು" ಹಗುರವಾಗಿ ಮಾಡಬಾರದೆಂದು ಹಳೇ ಒಡಂಬಡಿಕೆಯು ತಿಳಿಸಿತ್ತು. ಮಾಡಿದ ಆಣೆಗಳನ್ನು ನೆರವೇರಿಸಬೇಕಿತ್ತು (ಅರಣ್ಯಕಾಂಡ 30:2). ಆಣೆ ಮಾಡಿ, ಅದನ್ನು ನೆರವೇರಿಸದ ವ್ಯಕ್ತಿಯು, ಆಣೆಗೆ ಸಂಬಂಧಪಡುವದಿಲ್ಲ ಎಂದು ಫರಿಸಾಯರು ಬೋಧಿಸುತ್ತಿದ್ದರು (ಮತ್ತಾಯ 23:16, 18) ಅವರ ಈ ಸಿದ್ದಾಂತಗಳನ್ನು ಯೇಸು ವಿರೋಧಿಸಿದನು (ವಚನಗಳು 17, 19-22). ಈ ಹಿಂದೆ ಯೇಸು ತನ್ನ ಅನುಯಾಯಿಗಳಿಗೆ: "ಆದರೆ ನಾನು ನಿಮಗೆ ಹೇಳುವದೇನಂದರೆ ಆಣೆಯನ್ನೇ ಇಡಬೇಡ. ಆಕಾಶದ ಮೇಲೆ ಆಣೆ ಇಡಬೇಡ; ಅದು ದೇವರ ಸಿಂಹಾಸನವು. ಭೂಮಿಯ ಮೇಲೆ ಆಣೆ ಇಡಬೇಡ; ಅದು ಆತನ ಪಾದಪೀಠವು" (ಮತ್ತಾಯ 5:34, 35ಎ).

**ಅಪ್ರಧಾನ ಹಾಗೂ ಪ್ರಧಾನ (ಮತ್ತಾಯ 23:23, 24)**

ಫರಿಸಾಯರು, ತಮ್ಮ ಹಿತ್ತಲಿನಲ್ಲಿ ಬೆಳೆದ ಸೊಪ್ಪಿನಲ್ಲಿಯೂ ದಶಮ ಭಾಗವನ್ನು ನೀಡುವುದರಲ್ಲಿ ಶಿಸ್ತು ಬದ್ಧ ಹೊಂದಿದ್ದರೂ,[30] ತಮ್ಮ ಹೃದಯಗಳ ಅಸ್ಥಿರತೆಯ ಬಗ್ಗೆ ಶಿಸ್ತು ಬದ್ಧರಾಗಿರಲಿಲ್ಲ: "ನ್ಯಾಯವನ್ನು ಕರುಣೆಯನ್ನು ನಂಬಿಕೆಯನ್ನು ಬಿಟ್ಟುಬಿಟ್ಟಿದ್ದರು" (ವಚನ 23ಎ[31]; ನೋಡಿ ಮೀಕ 6:8).

ಕರ್ತನು ಅವರನ್ನು, "ನೀವು ಸೊಳ್ಳೇ ಸೋಸುವವರು. ಒಂಟೇ ನುಂಗುವವರು"[32] ಎಂದು ಕರೆದರು (ಮತ್ತಾಯ 23:24). ಅವರು ಜರಡಿಯಿಂದ, ಹೊಲಸಾದ ಸೊಳ್ಳೆಯನ್ನು ಸೋಸುತ್ತಿದ್ದರು ಎಂಬ ಸೋಜಿಗದ ಮಾತಿರುವುದು (ಯಾಜಕಕಾಂಡ 11:20, 23). ಅದೇ ವಿಧದಲ್ಲಿ, ಹೊಲಸಾದ ಒಂಟೆಯನ್ನು ನುಂಗಲು ಅವರು ಹಿಂಜರಿಯಲಿಲ್ಲ (ಯಾಜಕಕಾಂಡ 11:4).

ವಚನ 23 ಮತ್ತು 24ರಲ್ಲಿ, ದೇವರ ಚಿಕ್ಕ ಆಜ್ಞೆಗಳನ್ನು ಉಲ್ಲಂಘಿಸಬಹುದು ಅದರಲ್ಲಿ ಯಾವುದೇ ತಪ್ಪು ಇರುವದಿಲ್ಲವೆಂದು ಯೇಸು ಹೇಳುತ್ತಿದ್ದಾನೆಯೇ? ಎಂದಿಗೂ ಇಲ್ಲ. ಆದರೆ, ಇತರೆ ಸಂಗತಿಗಳು ನಿರ್ಲಕ್ಷಿಸದೇ, *ಇವುಗಳನ್ನು ಮಾಡಿರಿ ಅಂದನು* (ಮತ್ತಾಯ 23:23ಬಿ; ಒತ್ತಿ ಹೇಳಿದ್ದು ನನ್ನದು).

**ಬಾಹಿರ ಹಾಗೂ ಆತ್ಮನ ಸಂಗತಿಗಳು (ಮತ್ತಾಯ 23:25, 26)**

ಬಾಹಿರವಾಗಿ ಸ್ವಚ್ಛವಾಗಿದ್ದು, ಒಳಭಾಗದಲ್ಲಿ ಹೊಲಸಾಗಿರುವ ಪಾತ್ರೆಯ ಬಗ್ಗೆ ಯೇಸು ಮಾತಾಡಿದನು (ವಚನ 25; ನೋಡಿ ಲೂಕ 11:39). ಅವರು ಒಳಭಾಗವನ್ನು ಸ್ವಚ್ಛಮಾಡಿದರೆ, ಹೊರಭಾಗವು ತಾನೇ ಶುದ್ಧಿ ಹೊಂದುತ್ತದೆ ಅಂದನು (ವಚನ 26). ಮುಂದಿನ ಸಾರಿ ಪಾತ್ರೆ ತೊಳೆಯುವಾಗ ಈ ರೀತಿ ಪ್ರಯತ್ನಿಸಬೇಡಿ. ಪಾತ್ರೆಗಳಿಗೆ ಅದು ಅನ್ವಹಿಸುವದಿಲ್ಲ, ಆದರೆ ಹೃದಯಕ್ಕೆ ಜೀವಿತಕ್ಕೂ ಅನ್ವಯಿಸುತ್ತದೆ!

**ಪ್ರದರ್ಶನ ಹಾಗೂ ನಿಖರತ್ವ (ಮತ್ತಾಯ 23:27, 28)**

ಹೊರ ಹಾಗೂ ಒಳಭಾಗದ ಕುರಿತು ಯೇಸು ಮತ್ತೊಂದು ನಿದರ್ಶನ ಹೇಳಿದನು.[33]

ನೀವು ಸುಣ್ಣ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ. ಇವು ಹೊರಗೆ ಚಂದವಾಗಿ ಕಾಣುತ್ತವೆ. "ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತದೆ" (ವಚನ 27). ಹಾಗೆಯೇ ಅವರು, "ಹೊರಗೆ ಧಾರ್ಮಿಕವಾಗಿ ಸತ್ಪುರುಷರಂತೆ ಕಾಣಿಸಿಕೊಂಡರೂ, ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದ್ದರು" (ವಚನ 28).

**ಅಲಂಕಾರಿಕಾ ಮತ್ತು ಕ್ರಿಯಾತ್ಮಕ (ಮತ್ತಾಯ 23:29-36)**

ಅಳಿದು ಹೋದ ಪ್ರವಾದಿಗಳನ್ನು ಸನ್ಮಾನಿಸಲು ಫರಿಸಾಯರು ಮುಂದಾಗಿದ್ದರು (ವಚನ 29). ನಾವು ನಮ್ಮ ಹಿರಿಯರ ಕಾಲದಲ್ಲಿ ಇರುತ್ತಿದ್ದರೆ, ಪ್ರವಾದಿಗಳನ್ನು ಕೊಂದ ಪಾಪದಲ್ಲಿ ಪಾಲುಗಾರರಾಗುತ್ತಿರಲಿಲ್ಲ ಅನ್ನುತ್ತಿದ್ದರು (ವಚನ 30; ನೋಡಿ ವಚನ 37). "ಆದರೇ ನೀವು ನಿಮ್ಮ ತಂದೆಗಳಂತೇ ಇದ್ದೀರಿ" ಎಂದು ಯೇಸು ಹೇಳಿದನು (ವಚನಗಳು 31, 32).[34] "ನೀವುಗಳು ಪುನ ಪ್ರವಾದಿಗಳನ್ನು ಕೊಲ್ಲುವ ಸಮಯವು ಬೇಗನೆ ಬರುವುದು ಅಂದನು" (ವಚನ 36). ಯೇಸುವಿನ ಮಾತಿಗೆ ಗ್ರಾಸವಾಗುವಂತೆ, ಅವರು ಯೇಸುವನ್ನು ಕೊಲ್ಲಲು ಈಗಲೇ ಸಿದ್ಧರಾಗಿದ್ದರು (ವಚನ 34[35]). ದೇವರ ಸಂದೇಶಕನನ್ನು, "ಅವರು ಈ ರೀತಿ ನಡೆಸಿಕೊಂಡದ್ದರಿಂದ, ಶಾಪಗಳು ಈ ಸಂತತಿಯವರ ಮೇಲೆ ಬರುವುದೆಂದು" ಹೇಳಿದನು (ವಚನಗಳು 35, 36; LB).

## ಪ್ರಲಾಪ (ಮತ್ತಾಯ 23:37-39)

ಎರಡು ಸಾವಿರ ವರ್ಷಗಳ ಹಿಂದೆಯೇ ಈ ಮಾತುಗಳನ್ನು ಆಡಿದ್ದರೂ, ಈಗಲೂ ಅವುಗಳು ನಮ್ಮ ಕಿವಿಗಳಲ್ಲಿ ಉರಿಯುತ್ತಿವೆ. ಈ ಮಾತುಗಳಿಂದ ಯೇಸು ತನ್ನ ವೈರಿಗಳನ್ನು ಶಪಿಸಿದ್ದು, ಆತನ ಉದ್ದೇಶವಾಗಿರಲಿಲ್ಲ. ಆತನು ಯಾವಾಗಲೂ ತನ್ನ ಕೇಳುಗರ ಸ್ನೇಹಿತರ, ವೈರಿಗಳ ಬಗ್ಗೆ, ಚಿಂತನವುಳ್ಳವನಾಗಿದ್ದನು. ಆತನು "ಯಾರನ್ನು ಪ್ರೀತಿಸುತ್ತಾನೋ ಅವರನ್ನು ಶಿಕ್ಷಿಸುತ್ತಾನೆ" (ಜ್ಞಾನೋಕ್ತಿ 3:12ಎ; ನೋಡಿ ಇಬ್ರಿಯ 12:6) ಎಂದು ವೇದ ಹೇಳುತ್ತದೆ. ಅಂತ್ಯದ ವಚನದಲ್ಲಿ ಆತನ ಪ್ರೀತಿಯು ಧಾರಳವಾಗಿರುತ್ತದೆ.

ಈ ಹಿಂದೆಯೂ ಯೇಸು ಯೆರೂಸಲೇಮಿನ ಕುರಿತು ಕಣ್ಣೀರಿಟ್ಟಿದ್ದನು (ಲೂಕ 19:41-44). ಈಗ ಆತನು, "ಯೆರೂಸಲೇಮಿನ ಪ್ರವಾದಿಗಳ ಪ್ರಾಣ ತೆಗೆಯುವವರು ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸದು ಕೊಲ್ಲುವವಳೇ!" (ಮತ್ತಾಯ 23:37ಎ).[36] ಈ ಹಿಂದೆ ಯೆರೂಸಲೇಮು ಪ್ರವಾದಿಗಳನ್ನು ತಿರಸ್ಕರಿಸಿತ್ತು. ಈಗ ಮೆಸ್ಸೀಯನನ್ನು ತಿರಸ್ಕರಿಸಿದ್ದಾಳೆ. "ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು. ಅದರಲ್ಲಿ ಫರಿಸಾಯ, ಧಾರ್ಮಿಕನಾಯಕರೂ ಒಳಗೊಂಡಿದ್ದಾರೆ.[37] ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು" (ವಚನ 37ಬಿ). "ದೇವರ ಪಟ್ಟಣವು"[38] ಆತನ ಮಗನನ್ನು ತಿರಸ್ಕರಿಸಿತ್ತು - ಅದು ಆತನ ಹೃದಯವನ್ನು ವೇದನೆಗೆ ಒಳಪಡಿಸಿತು.

ಆ ಪಟ್ಟಣದ ಕಠಿಣತೆಯ ನಿಮಿತ್ತ, ಮುಂದೆ ಮಹಾ ಸಂಕಟ ಬರುವುದಿತ್ತು: "ನೋಡಿರಿ ನಿಮ್ಮ ಆಲಯವು ಬರುದಾಗಿಬಿಟ್ಟದೆ" (ವಚನ 38). ದೇವಾಲಯವನ್ನು ಕುರಿತು "ಆಲಯ"[39] ಎಂದು ಹೇಳಲಾಗಿದೆ. ನಾಲ್ವತ್ತು ವರ್ಷಗಳಲ್ಲಿ ದೇವಾಲಯವು ನಾಶವಾಗುವುದಿತ್ತು. ರೋಮಾಯರು ಅದನ್ನು ನಾಶಮಾಡಿದರು.[40] ಅದು ಖಂಡಿತವಾದ ಕಾರ್ಯವಾದ್ದರಿಂದ, ಯೇಸು ನಾಶನದ ಕುರಿತು ನಿಖರವಾಗಿ ಹೇಳಿದನು.

ಆದಾಗ್ಯೂ ಯೇಸು ಆ ಪಟ್ಟಣವನ್ನು ಪ್ರೀತಿಸಿ, ಅಲ್ಲಿಯವರು ಆತನನ್ನು ಒಪ್ಪಿಕೊಳ್ಳಬೇಕೆಂದು ಬಯಸಿದನು.[41] ಆದ್ದರಿಂದ ಆತನು: "ಈಗಿನಿಂದ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ

ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು" (ವಚನ 39). ವಚನ 39 ರಿಂದ ಕಡೇಯ ಭಾಗದ ವಚನ 26 ರಲ್ಲಿ ಕೀರ್ತನೆಯ 118ರ ಹೇಳಿಕೆಯಾಗಿದೆ.[42] ಮೆಸ್ಸೀಯನ ಕುರಿತ ಆನಂದವಾಗಿದೆ. ಯೇಸು ಹೇಳಿದ ಈ ಮಾತುಗಳನ್ನು ಕೆಲವು ದಿವಸಗಳ ಹಿಂದೆ ಜನರು ಪ್ರತಿಧ್ವನಿಸಿದ್ದರು. ಆಗ ಯೇಸು ಯೆರೂಸಲೇಮನ್ನು ಪ್ರವೇಶಿಸಿದ್ದನು (ಮತ್ತಾಯ 21:9; ಮಾರ್ಕ 11:9; ಲೂಕ 19:38; ಯೋಹಾನ 12:13). ಆದರೆ ಆ ಮಾತಿನಲ್ಲಿ ಅಡಗಿದ್ದ ಸೂಚನೆಗಳನ್ನು ಆ ಜನರು ಅರಿಯದೆ ಇರುವದು ದುಃಖದ ಸಂಗತಿಯಾಗಿದೆ. ಯೇಸುವನ್ನು ಅವರು ಪುನಃ ನೋಡಬೇಕೆಂದಿದ್ದರೆ (ಕರ್ತನು ಒಡೆಯನೆಂದು) *ಅವರು ಹೃದಯ ಪೂರ್ವಕವಾಗಿ* ಈ ಮಾತುಗಳನ್ನು ಹೇಳಬೇಕಿತ್ತು, ಅದು ಮಾತ್ರ ಯೆರೂಸಲೇಮಿನ ನಿರೀಕ್ಷೆಯಾಗಿತ್ತು.[43]

## ಮುಕ್ತಾಯ

ಈ ಪಾಠವನ್ನು ಅಂತ್ಯಗೊಳಿಸುವಾಗ, ಮೂರು ಸತ್ಯಾಂಶಗಳನ್ನು ನೆನಪು ಮಾಡೋಣ:[44]

(1) ದೇವರು ಕಪಟತನವನ್ನು ದ್ವೇಷಿಸುತ್ತಾನೆ. ನಾವು ನಮ್ಮ ಆತ್ಮಗಳನ್ನು ಪರೀಕ್ಷಿಸಿಕೊಳ್ಳೋಣ.

(2) ದೇವರು ನಂಬಿಕೆಯನ್ನು ಬಯಸುತ್ತಾನೆ. "ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ" ಎಂದು ಹೇಳೋಣ.

(3) ದೇವರು ವಿಧೇಯತೆ ಬಯಸುತ್ತಾನೆ. "ಅದಕ್ಕೆ ಪ್ರತಿಕ್ರಿಯಿಸೋಣ" ಕೋಳಿಯು ತನ್ನ ಮರಿಗಳನ್ನು ಸೇರಿಸಿಕೊಳ್ಳುವಂತೆ, ನಿಮ್ಮನ್ನು ಸೇರಿಸಿಕೊಳ್ಳಲು ಎಷ್ಟೋ ಸಾರಿ ಪ್ರಯತ್ನಿಸಿದೆನು!

---

## ಮಾಹಿತಿ

"ದೇವರು ನೀಡುವ ಅಘಾತದ ಚಿಕಿತ್ಸೆ" ಎಂಬ ಮತ್ತೊಂದು ತಲೆ ಬರಹ ನೀಡಬಹುದು, ಪ್ರಸಂಗಕ್ಕೆ ಅನುಕೂಲವಾಗುವಂತೆ, ಒಂದು ಚಿಕ್ಕ ಪೆಟ್ಟಿಗೆ, ಸಣ್ಣ ಬಟ್ಟಲು, ಕೋಳಿಯ ಹಾಗೂ ಅದರ ಮರಿಗಳ ಚಿತ್ರವನ್ನು ಬಳಸಿರಿ.

---

ಟಿಪ್ಪಣಿಗಳು

[1]ಫರಿಸಾಯರ ಸಂಗಡ ಹೆರೋದ್ಯರು ಹಾಗೂ ಸದ್ದುಕಾಯರನ್ನು ಯೇಸು ಎಚ್ಚರಿಸಿದನು (ಮತ್ತಾಯ 16:6; ಮಾರ್ಕ 8:15), ಆದರೆ ಒತ್ತಡವು ಫರಿಸಾಯನ ಬಗ್ಗೆ ಇದೆ. [2]ಕಥೆಯ ಹೆಚ್ಚಿನ ವಿವರಣೆ ನೀಡಬಹುದು. [3]"ಒಬ್ಬ ಕುರುಬನ ಚಿಂತೆ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 5ನೇ* ಪುಸ್ತಕದಲ್ಲಿ ನೋಡಿ. [4]ಫರಿಸಾಯರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ. ಇವರ ಬಗ್ಗೆ ಅನೇಕವಾದ ಮಾಹಿತಿಗಳನ್ನು "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. ಮತ್ತು "ದೇವರೇ, ಕನಿಕರ ತೋರು!" ಎಂಬ ಪಾಠವನ್ನು ನೋಡಿ. [5]ಮುಂಜಾನೆ ಆರಾಧನೆ ಸಮಯದಲ್ಲಿ "ಗೆದ್ದವನಾದರೂ ... ಜಯವೀರನೇ!" ಎಂಬ ಪಾಠವು ಹೇಳಲಾಗಿದೆ. [6]ಇತರರಲ್ಲಿ ಕಪಟತನವನ್ನು ನೋಡುವುದು ಸುಲಭ "ಕಪಟ" ತನದ ಪಾಠ ನೋಡಿರಿ. [7]ಅನ್ವಯವನ್ನು ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ. ನೀವು ನಿವಾಸವಿರುವ ಸ್ಥಳಕ್ಕೆ ಅನುಗುಣವಾಗಿ ಸಾಮಾಜಿಕ, ನೈತಿಕ, ಹಾಗೂ ಧಾರ್ಮಿಕ ಸ್ಥಿತಿಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳಲಾಗಿದೆ. [8]ಈ ಭಾಗದಲ್ಲಿ ಮೂರು ಅಂಶಗಳನ್ನು Warren Wiersbe, *The Bible Exposition Commentary,* vol. 1 (Wheaton, Ill.: Victor Books, 1989), 83-86 ರಿಂದ ತೆಗೆದುಕೊಳ್ಳಲಾಗಿದೆ. [9]ಹೆಚ್ಚಿನ ಮಾಹಿತಿಗಳಿಗೆ "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. [10]"ಕಪಟಿ" ಎಂಬುದರ ಅರ್ಥವನ್ನು "ಗೆದ್ದವನಾದರೂ ... ಜಯವೀರನೇ!" ಎಂಬ ಪಾಠದಲ್ಲಿ

ನೀಡಲಾಗಿದೆ.

[11]ಅವರಲ್ಲಿರುವ ಬಲಹೀನತೆಯನ್ನು ಕಂಡುಹಿಡಿದರು ಎಂಬ ಮಾತು ನಮ್ಮ ದೇಶದಲ್ಲಿ ಬಳಕೆಯಲ್ಲಿದೆ. [12]"ಒಂದು ಒಳ್ಳೆಯ ವಿಚಾರ ಕೆಟ್ಟದ್ದಾಗಿ ಪರಿಣಮಿಸಿತು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 3ನೇ* ಪುಸ್ತಕದಲ್ಲಿ ನೋಡಿ. [13]*The Analytical* Greek Lexicon (London: Samuel Bagster & Sons Ltd., 1971), 431. [14]ಧರ್ಮೋಪದೇಶಕಾಂಡ 6:8, 9 ದೇವರ ಆಜ್ಞೆಗಳನ್ನು ಹೃದಯಲ್ಲಿ ಮನಸಲ್ಲಿ ಬರೆಯುವುದರ ಬಗ್ಗೆ ಮತ್ತು ಅವುಗಳನ್ನು ಕುಟುಂಬಕ್ಕೆ ಪ್ರಮಾಣಿಕೆಯಿಡಲು ಬೋಧಿಸುತ್ತದೆ (ನೋಡಿ ವಿಮೋಚನಕಾಂಡ 13:9; ಧರ್ಮೋಪದೇಶಕಾಂಡ 11:18ಎ). ಒಂದು ಡಬ್ಬಿಯನ್ನು ಧರಿಸಿಕೊಳ್ಳುವನು ಸಾಲ ಆಜ್ಞೆಯನ್ನು ಹೇಳುವುದು ಅದನ್ನು ಮಾಡುವುದು ಕಷ್ಟ. ಹೆಚ್ಚಿ ವಿವರಣೆಗಳಿಗೆ "Teaching Our Children to Love God" (Fort Worth, Tex.: Star Publishing Co., n.d.) ನೋಡಿ. [15]ನಾನು ನಿನ್ನಗಿಂತ ಆತ್ಮಿಯತೆ ಉಳ್ಳವನೂ ಯಾಕೆಂದರೆ "ನಿನ್ನ ಡಬ್ಬಿಗಿಂತ ನನ್ನ ಡಬ್ಬಿ ದೊಡ್ಡದು" ಎಂಬುದರಲ್ಲಿ ಹಾಸ್ಯಕಾಣುವುದಾಗಿದೆ. [16]ಯೇಸುವಿನ "ನಿಲುವಂಗಿಯನ್ನು" ಜನರು ಮುಟ್ಟಿದರು (ಮತ್ತಾಯ 9:20; 14:36). [17]ಫರಿಸಾಯರ "ಆಕರ್ಷಣೆಯವಾದ ಪ್ರದರ್ಶಿಣೆಯಗಳನ್ನು" ವಿವರಿಸಲು ದೀರ್ಘವಾದ ಪ್ರಾರ್ಥನೆಗಳ ಉದಾಹರಣೆಗಳನ್ನು ನೋಡಿ (ಮತ್ತಾಯ 23:14; ಮಾರ್ಕ 12:40). [18]"ಬಟ್ಟೆಯು" ಮನುಷ್ಯನ ಅಧಿಕಾರವನ್ನು ಸೂಚಿಸುತ್ತದೆ: ಉಡುಪುಗಳು ಉಡುವವನ ಮುಖ್ಯತ್ವವ ಬಗ್ಗೆ ಸೂಚಿಸುತ್ತದೆ. ಫರಿಸಾಯರು ಮತ್ತು ಸುದ್ದಕಾಯರು "ಅಧಿಕಾರದ ನಿಲುವಂಗಿಗಳನ್ನು" ಧರಿಸಿದ್ದರು. [19]J. W. McGarvey and Philip Y. Pendleton, *The Fourfold Gospel or a Harmony of the Four Gospels* (Cincinnati: Standard Publishing Foundation, n.d.), 313. [20]ಯೇಸು ಕ್ರಿಸ್ತನ ಶಿಷ್ಯರು ಆತನನ್ನು "ರಬ್ಬಿ" ಎಂದರು (ಮತ್ತಾಯ 26:25; ಮಾರ್ಕ 9:5; ಯೋಹಾನ 3:2).

[21]ವಚನ 10ನ್ನು ಹಿಂಬಾಲಿಸಿ ವಿನಯದ ಅವಶ್ಯಕತೆಯ ಬಗ್ಗೆ ಮುಂಚೆ ಹೇಳಿದ ಮಾತುಗಳನ್ನು ಯೇಸು ಮತ್ತೇ ಹೇಳಿದರು (ವಚನಗಳು 11, 12; ನೋಡಿ ಮತ್ತಾಯ 20:26, 27; ಮಾರ್ಕ 10:43, 44). [22]"ಪೌಲನು ಆತ್ಮಿಕ ತಂದೆ"ಯಾಗಿದ್ದರು (1 ಕೊರಿಂಥ 4:15) - ಆದರೆ "ಪಾಲ್‌ತಂದೆ" ಎಂಬ ಬಿರುದಿನಿಂದ ಕರೆಯಲ್ಪಟ್ಟಿಲ್ಲ. [23]KJV ಯಲ್ಲಿ ಮತ್ತಾಯ 23:14ರಲ್ಲಿ ಕಾಣಬಹುದು ಮತ್ತು NASB ಬ್ರ್ಯಾಕೇಟ್‌ನಲ್ಲಿ ಹಾಕಿದ್ದಾರೆ. ಪ್ರಾಚೀನ ಪ್ರತಿಗಳಲ್ಲಿ ಮತ್ತಾಯನಲ್ಲಿ ಕಾಣಿಸುವುದಿಲ್ಲ, ಈ ಸಂದರ್ಭದಲ್ಲಿ ಯೇಸು ಶಪಿತವಾದ ಮಾತುಗಳಲ್ಲಿನ ಭಾಗವಾಗಿವೆ ಎಂದು ಮಾರ್ಕ ಮತ್ತು ಲೂಕನು ಸ್ಪಷ್ಟಪಡಿಸಿದ್ದಾನೆ. ನಾನು ಇಲ್ಲಿ ಎಂಟನೆಯ "ಶಾಪ"ವನ್ನು KJV ಮತ್ತು NASB ಕಾಣಿಸುವುದನ್ನು ಸೇರಿಸಿದ್ದೇನೆ. [24]David Smith, *Our Lord's Earthly Life* (New York: G. H. Doran, 1926), 353; quoted in H. I. Hester, *The Heart of the New Testament* (Liberty, Mo.: Quality Press, 1963), 194. [25]Warren Wiersbe ರವರು "ಶಾಪಗಳ" ಬಗ್ಗೆ ಬೇರೆ ದೃಷ್ಟಿಕೋನವನ್ನು ಉಪಯೋಗಿಸಿದರು, ದನ್ಯತೆಗಳೊಂದಿಗೆ ಹೋಲಿಸಿದರು. (Wiersbe, 84-86.) [26]ಲೂಕ 11:52 ರ ಮೇಲಿನ ವ್ಯಾಖ್ಯಾನಗಳನ್ನು "ಒಬ್ಬ ಕುರುಬನ ಚಿಂತೆ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನ್ನು* ನೋಡಿ. [27]"ವಿಧವೆಯರ ಕುಟುಂಬಗಳನ್ನು ನುಂಗುವವರು" ಎಂಬ ಪ್ರಯೋಗವು ಪರಿಸಾಯರಿಗೆ ಹೇಗೆ ಅನ್ವಯಿಸುತ್ತದೆ ಎಂಬುದು ಅರಿಯಲಾರವು, ಧರ್ಮಶಾಸ್ತ್ರದ ಉಪದೇಶಕರಲ್ಲಿ ಇಂತಹ ನಡವಳಿಕೆಯನ್ನು ಕಾಣಬಹುದು. [28]Coy Roper, "Factors Contributing to the Origin and Success of the Pre-Christian Jewish Missionary Movement" (Ph.D. diss., University of Michigan, 1988), 20-49. [29]ಸ್ವಭಾವದಲ್ಲಿ ಪಾಲುದಾರರು ಎಂಬ ವಾಕ್ಯದಲ್ಲಿ ಇಬ್ರಿಯ ಭಾಷೆಯಲ್ಲಿ "of" ಎಂಬ ಪದವು ಬಳಕೆಯಲ್ಲಿದೆ. ಯಾಕೋಬ 3:6ರಲ್ಲಿ ಭಾಷೆಯ ಕುರಿತು ಉಪಯೋಗಿಸಿದಾಗ ಇಂತಹ ಪ್ರಯೋಗ ವನ್ನೆ ಉಪಯೋಗಿಸಿದರು. [30]ಇದು ಸುವಾಸನೆಗಾಗಿ ಬಳಸುವುದು. Anise ಮತ್ತು cumin ಎಂಬವು ಊಟದ ತಯಾರಿಯಲ್ಲಿ ಮತ್ತು ವೈದ್ಯಕೀಯ ಔಷಧಿಗೆ ಬಳಸುತ್ತಾರೆ.

[31]"ಬಾರವಾದದ್ದು" ಎಂಬ ಪದಕ್ಕೆ "ತೆಲುವೂ" ಮತ್ತು "ಬಾರ" ಆಜ್ಞೆಗಳು ಎಂಬುದರ ಮೇಲಿನ ವ್ಯಾಖ್ಯಾನವನ್ನು ಹಿಂದಿನ ಪಾಠದಲ್ಲಿ ನೋಡಿರಿ. [32]"ಕುರುಡು ಮಾರ್ಗದರ್ಶಕರು" ಎಂದು ಯೇಸು ಎರಡು ಬಾರಿ ಹೇಳಿದನು (ವಚನಗಳು 16, 24). ಈ ಪದದ ಮುಖ್ಯತ್ವವನ್ನು ಮತ್ತಾಯ 15:14ರಲ್ಲಿ ನೋಡಿ. [33]ಪ್ರಮುಖ "ಶಾಪಗಳ" ಮಧ್ಯ ಒಂದರ ಮೇಲೊಂದು ಇದೆ, ಒಂದೊಂದು ಪ್ರತ್ಯೇಕಿಸಿ ಹೇಳುವುದು ಮುಖ್ಯವೆಂದು ಕರ್ತರು ಹೇಳಿದರು. [34]"ನೀತಿವಂತನಾದ ಹೆಬೇಲನ ರಕ್ತವು ಮೊದಲುಗೊಂಡು ನೀವು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದು ಹಾಕಿದ ಬರಕೀಯನ ಮಗನಾದ ಜೆಕರ್ಯನ ರಕ್ತದವರೆಗೂ" (ಮತ್ತಾಯ 23:35) ಎಂಬುದಕ್ಕೆ ಅವರೇ ಹೊಣೆ ಎಂದು ಯೇಸು ಹೇಳಿದರು ಎಬೇಲನ ಮರಣದ ಬಗ್ಗೆ ಆದಿಕಾಂಡ 4:8ರಲ್ಲಿ ದಾಖಲಾಗಿದೆ; ಜೆಕರೀಯನ

ಮರಣದ ಬಗ್ಗೆ (ಕಿರು ಪ್ರವರ್ತನಲ್ಲ) 2 ಪೂರ್ವಕಾಲವೃತ್ತಾಂತ 24:20-22ರಲ್ಲಿ ದಾಖಲಾಗಿದೆ. ಇಬ್ರಿಯ ಬೈಬಲು ಆದಿಕಾಂಡದಿಂದ ಪ್ರಾರಂಭವಾಗಿ 2 ಪೂರ್ವಕಾಲವೃತ್ತಾಂತದಲ್ಲಿ ಮುಗಿಯುತ್ತದೆ, "ಆರಂಭದಿಂದ ಅಂತ್ಯದವರೆಗೆ" ಎಂಬುದಕ್ಕೆ ಇದು ಸಮಾನವಾಗಿದೆ. [35]ವಚನ 34ಕ್ಕೆ ಅಪೊಸ್ತಲರ ಕೃತ್ಯಗಳು ಪೂರ್ಣ ವಿವರಣೆ ನೀಡುತ್ತದೆ. "ನಿಮ್ಮ ಸಭಾ ಮಂದಿರಗಳಲ್ಲಿ ಕೊರಡೆಗಳಿಂದ ಹೊಡೆದು" ಎಂಬ ವಾಕ್ಯವನ್ನು ಗಮನಿಸಿ. ಪೌಲನು ಸಭಾಮಂದಿರದಲ್ಲಿ ಕೊರಡೆಗಳಿಂದ ಹೊಡೆಯಲ್ಪಟ್ಟನು (2 ಕೊರಿಂಥ 11:23). [36](ಮತ್ತಾಯ 23:37-39) ವಾಕ್ಯವನ್ನು ಪೆಲಿಯದಲ್ಲಿ ಯೇಸು ಬಳಸಿದ್ದನು (ಲೂಕ 13:34, 35). [37]ಕೋಳಿಯ ಮರಿಯ ಕಥೆಯನ್ನು ಹೇಳಿರಿ. ಆದರೆ ಅಮೇರಿದಲ್ಲಿನ ಯುವಕರು ಹಂಗಲ್ಲ. ಅದೇ ನಿಮ್ಮ ಕೇಳುಗರಿಗೆ ನಿಜವಾಗಿದ್ದರೆ ಈ ದೃಷ್ಯವನ್ನು ಹೃದಯಕ್ಕೆ ತಾಕುವಂತೆ ನೀನು ಹೇಳಬಹುದು. [38]ನೋಡಿ ಕೀರ್ತನೆ 48:1, 8. [39]ವಚನ 38 ರೊಂದಿಗೆ ಯೆರೆಮೀಯ 12:7ನ್ನು ಹೋಲಿಸಿ. [40]ಲೂಕ 19:41-44ರ ಮೇಲಿನ ವಿವರಣೆಗೆ, "ಕಳೆದು ಕೊಂಡ ಅವಕಾಶಗಳು" ಎಂಬ ಪಾಠವನ್ನು ನೋಡಿರಿ. ಯೆರೂಸಲೇಮಿನ ನಾಶನದ ಬಗ್ಗೆ (ದೇವಾಲಯವನ್ನು ಸೇರಿಸಿ) ಮುಂಬರುವ ಪಾಠಗಳಲ್ಲಿ ಚರ್ಚಿಸಲಾಗಿದೆ.

[41]ನಿನವೆಯ ನಾಶನದ ಬಗ್ಗೆ ಯೋನನು ಪ್ರವಾದಿಸಿದ್ದನು (ಯೋನ 3:4); ಆದರೆ ಜನರು ಮಾನಸಾಂತರ ಪಟ್ಟಾಗ, ನಾಶನವು ತಪ್ಪಿತು (ಯೋನ 3:10). ದೇವರು ಕೃಪಾಪೂರ್ಣನು. [42]118ನೇ ಕೀರ್ತನೆ ಮೆಸ್ಸೀಯನ ಕೀರ್ತನೆ (ನೋಡಿ ಅಪೊಸ್ತಲರ ಕೃತ್ಯಗಳು 4:11). ಕ್ರಿಸ್ತನ ಜೀವನದಲ್ಲಿ 118ನೇ ಕೀರ್ತನೆ 22ನೇ ವಚನವನ್ನು ಯೇಸು ಉಲ್ಲೇಖಿಸಿದರು (ಮತ್ತಾಯ 21:42), ನಾಯಕರು ತಿರಸ್ಕರಿಸುವರು ಎಂದು ಪ್ರವಾದನೆ ಹೇಳಲಾಗಿದೆ. [43]ಮತ್ತಾಯ 23:39 ಅಸ್ಪಷ್ಟವಾಗಿದೆ. ಅದು "ನಾನು ಹೋದ ಮೇಲೆ, *ತೀರ್ಪುದಿನ* ಬರುವವ ರೆಗೆ ನೀವು ನನ್ನನ್ನು ಮತ್ತೇ ನೋಡಲಾರಿರಿ (ಯೆರೂಸಲೇಮಿನ ನಾಶನದ ಕುರಿತು)'' ಹೇಳುತ್ತದೆ. ಏನೇ ಆದರೂ, ಕೀರ್ತನೆ 118:26 ನಕಾರವಾಗಿರದೆ, ಸಕಾರವಾಗಿದೆ. ಹೀಗಾಗಿ, ನಾನು ಸಕಾರದ ವ್ಯಾಖ್ಯಾನವನ್ನು ಈ ವಚನದ ಬಗ್ಗೆ ಕೊಟ್ಟಿದ್ದೇನೆ. ಅದೇ ಸಮಯದಲ್ಲಿ ಪಟ್ಟಣದ ಕಠಿಣ ಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳ ಬೇಕು. ಯೇಸು ಹೇಳಿದ ಶರತ್ತನ್ನು ನೆರವೇರಿಸುವುದೆಂದು ಸ್ವಲ್ಪವು ನಿರೀಕ್ಷೆಣೆ ಇರಲಿಲ್ಲ. ಈ ವಚನದ ಬಗ್ಗೆ ಕೊನೆಯ ಮಾತು: ಒಂದಾನೊಂದು ದಿನ ಯೇಸು ಭೂಮಿ ಮೇಲೆ ಸಾವಿರ ವರ್ಷ ಆಳುವನು, ಆ ದಿನದಂದು ಆತನನ್ನು ಯೆರೂಸಲೇಮು ಸ್ವಾಗತಿಸುವದೆಂದು ಇದು ಬೋಧಿಸುತ್ತಿಲ್ಲ. R. T. France ರವರು ಹೀಗೆ ಬರೆದಿರುವರು, "*ನೀವು ಹೇಳುವವರೆಗೆ* ಎಂಬ ಗ್ರೀಕ್‌ನ ಭಾಷಾಪ್ರಯೋಗ ದೃಢವಾದ ಭವಿಷ್ಯತ್ತಿಗಿಂತ ಅನಿಶ್ಚಿತವಾದ ಸಾಧ್ಯತೆಯನ್ನು ವಿವರಿಸುತ್ತದೆ; ... ಈ ಶರತ್ತು ನೆರವೇರುವದೆಂಬ ವಾಗ್ದಾನವಿಲ್ಲ.'' ಮತ್ತೇ ಆತನು ಹೀಗೆ ಸೂಚಿಸಿದನು "ಅಧ್ಯಾಯ 23ರಲ್ಲಿ (ಇದರ ಶಿಕರಾಗ್ರ) ಮುಂದುವರೆದ ಆಲೋಚನದಲ್ಲಿ ಮುಂದಿನ ಮನಸಾಂತರದ ಬಗ್ಗೆ ಭವಿಷ್ಯವನ್ನು ಕಾಣಲಾರೆವು ಮತ್ತು ಅಧ್ಯಾಯ 24 ಬರಲಿರುವ ತೀರ್ಪಿನ ಬಗ್ಗೆ ಹೇಳುತ್ತದೆ, ಆದರೆ ಮತ್ತಾಯ ಸುವಾ ರ್ತೆಗೆ ಅನುಗುಣವಾಗಿ, ಇಸ್ರಾಯೇಲ್ಯರ ಕಡೆಯ ಅವಕಾಶವನ್ನು ಕುರಿತು ಪದೇ ಪದೇ ಹೇಳುತ್ತದೆ, ಮತ್ತು ದೇವರ ಸಾರ್ವತ್ರಿಕ ಹೊಸ ಪ್ರಜೆಗಳ ಕುರಿತು (8:11-12; 12:38-45; 21:40-43; 22:7; 23:32-36; ಮುಂತಾದವು) ... ವಚನವು [T]he ಎಂದು ಅಸ್ಪಷ್ಟವಾಗಿ ಆರಂಭವಾಗಿ ದೇವರ ಮನೆಯನ್ನು ಪರಿತ್ಯಕ್ತ ಮಾಡುವುದರೊಂದಿಗೆ 38ನೇ ವಚನ ಸಂಬಂಧಿಸುತ್ತದೆ" (R. T. France, *The Gospel According to Matthew* [Grand Rapids, Mich.: Wm. B. Eerdmans Publishing Co., 1985], 332-33). [44]ಹಲವು ಅನ್ವಯಗಳನ್ನು ನಾನು ಸೂಚಿಸಿದ್ದೇನೆ ನಾನು ಹೇಳುವುದರಿಂದ ಹಲವನ್ನು ವಿಸ್ತರಿಸಿ ಹೇಳಬಹುದು, ಅಥವ ನಿಮ್ಮ ಕೇಳುಗರಿಗೆ ಸಂಬಂಧಿಸಿದವುಗಳನ್ನು ನೀವು ಒಂದು ಪಟ್ಟಿ ಮಾಡಬಹುದು. [45]ನೀವು ಕ್ರೈಸ್ತರಲ್ಲದವರಿಗೆ ಪ್ರತಿಕ್ರಿಯೆ ತೋರಿಸುವುದರ ಬಗ್ಗೆ ಹೇಳಬಹುದು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38) ಮತ್ತು ಅಪನಂಬಿಕೆಯುಳ್ಳ ಕ್ರೈಸ್ತರಿಗೆ ಹೇಗೆ ದೇವರ ಬಳಿಗೆ ತಿರುಗಬಹುದು ಎಂಬುದನ್ನು ಹೇಳಬಹುದು (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9; ಯಾಕೋಬ 5:16).